# ಆನೆ ಮತ್ತು ಮಂಗ

ಮುರಲೀಧರ ಕುಲಕರ್ಣಿ
ಕಲೆ: ಸಂತೋಷ್ ಸಸಿಹಿತ್ಲು

ಒಂದು ಕಾಡಿನಲ್ಲಿ ಒಂದು ಆನೆ, ಒಂದು ಮಂಗ ವಾಸವಾಗಿದ್ದವು. ಮಂಗ ತನ್ನ ಸ್ವಭಾವಕ್ಕೆ ಅನುಗುಣವಾಗಿ ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುತ್ತಿತ್ತು. ಅತಿ ಎತ್ತರವಾದ ಮರದ ತುದಿಗೆ ಹೋಗಿ ಕುಳಿತುಕೊಳ್ಳುತ್ತಿತ್ತು. ಆನೆ ತುಂಬಾ ಬಲಶಾಲಿಯಾಗಿದ್ದು, ದೊಡ್ಡ ದೊಡ್ಡ ಮರದ ಕೊಂಬೆಗಳನ್ನು ತನ್ನ ಸೊಂಡಿಲಿನಿಂದ ಮುರಿದು ಹಾಕುತ್ತಿತ್ತು. ಗಿಡಗಳನ್ನು ಬೇರು ಸಹಿತ ಕಿತ್ತಿ ಎಸೆಯುತ್ತಿತ್ತು. ಎರಡಕ್ಕೂ ತಮ್ಮ ಶಕ್ತಿಯ ಬಗ್ಗೆ ಗರ್ವವಿತ್ತು. ಮಂಗ ತಾನು ಆನೆಗಿಂತ ಶ್ರೇಷ್ಠ ಎಂದು ಭಾವಿಸಿದ್ದರೆ, ಆನೆ ತಾನು ಮಂಗಕ್ಕಿಂತ ಶ್ರೇಷ್ಠ ಎಂದು ಭಾವಿಸಿತ್ತು. ಆಗಾಗ ಅವುಗಳಲ್ಲಿ ತಮ್ಮ ಶ್ರೇಷ್ಠತೆಯ ಬಗ್ಗೆ ವಾದವಿವಾದವು ನಡೆಯುತ್ತಿತ್ತು, ಬಲಪ್ರದರ್ಶನವೂ ನಡೆಯುತ್ತಿತ್ತು.

ಯಾವ ಮರದ ಕೆಳಗೆ ಅವು ತಮ್ಮ ಶಕ್ತಿಯ ಬಗ್ಗೆ ಚರ್ಚಿಸುತ್ತಿದ್ದವೋ ಆ ಮರದ ಮೇಲೆ ಒಂದು ಗೂಬೆ ವಾಸವಾಗಿತ್ತು. ಗೂಬೆ ತುಂಬಾ ಬುದ್ಧಿವಂತವಾಗಿತ್ತು. ಆನೆ ಹಾಗೂ ಮಂಗದ ಚರ್ಚೆಯನ್ನು ಕೇಳಿ ಅದಕ್ಕೆ ತಲೆ ಕೆಟ್ಟು ಹೋಗಿತ್ತು. ಅವರೆಡಕ್ಕೂ ಪಾಠ ಕಲಿಸಬೇಕೆಂದು ಅದು ನಿರ್ಧರಿಸಿತು. ಒಂದು ದಿನ ಅದು ಅವೆರಡನ್ನು ಕುರಿತು 'ನಿಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು ಎಂಬುದು ಇಂದೇ ನಿರ್ಧಾರವಾಗಲಿ. ಈ ಕಾಡಿನ ತುದಿಯಲ್ಲಿ ಹರಿಯುವ ನದಿಯ ಆಚೆಯ ದಡದಲ್ಲಿ ಒಂದು ಮರವಿದೆ. ಆ ಮರದ ಮೇಲೆ ಒಂದು ಸ್ವರ್ಣ ಫಲವಿದೆ. ಆ ಸ್ವರ್ಣ ಫಲವನ್ನು ಯಾರು ನನಗೆ ತಂದು ಕೊಡುವರೋ ಅವರೇ ಶ್ರೇಷ್ಠರು ಎಂದು ನಾನು ಭಾವಿಸುವೆ' ಎಂದು ಹೇಳಿತು.

ಗೂಬೆಯ ಮಾತನ್ನು ಕೇಳಿ ಎರಡಕ್ಕೂ ತುಂಬಾ ಸಂತೋಷವಾಯಿತು. ಅವೆರಡೂ ಸ್ವರ್ಣಫಲವನ್ನು ತರಲು ಹೊರಟವು. ಮಂಗವು ಮರದಿಂದ ಮರಕ್ಕೆ ಹಾರುತ್ತ ಬಹುಬೇಗನೆ ನದಿಯನ್ನು ತಲುಪಿತು. ಆದರೆ ನದಿಯು ತುಂಬಾ ರಭಸವಾಗಿ ಹರಿಯುತ್ತಿತ್ತು. ನದಿಯಲ್ಲಿ ಭಾರಿ ಸೆಳೆತವಿತ್ತು. ಒಂದು ವೇಳೆ ಮಂಗ ನದಿಯನ್ನು ದಾಟಲು ಪ್ರಯತ್ನಿಸಿದ್ದರೆ ಅದು ನದಿಯಲ್ಲಿ ಕೊಚ್ಚಿಕೊಂಡು ಹೋಗುವ ಸಂಭವವಿತ್ತು. ಆದ್ದರಿಂದ ಅದು ಆನೆಯ ಬರುವಿಗಾಗಿ ಕಾಯತೊಡಗಿತು. ಇತ್ತ ಆನೆ ತನ್ನ ದಾರಿಯಲ್ಲಿ ಅಡ್ಡ ಬಂದ ಗಿಡಮರಗಳನ್ನು, ಪರದೆಗಳನ್ನು ಮುರಿಯುತ್ತ ದಾರಿ ಮಾಡಿಕೊಂಡು ಅದು ಕೂಡ ನದಿಯ ದಡವನ್ನು ತಲುಪಿತು.

ಆಗ ಮಂಗ ಆನೆಯನ್ನು ಕುರಿತು, 'ನಾನಂತೂ ಈ ನದಿಯನ್ನು ದಾಟಲಾರೆ. ನೀನೆ ಹೋಗಿ ಸ್ವರ್ಣಫಲವನ್ನು ತೆಗೆದುಕೊಂಡು ಬಾ' ಎಂದು ಹೇಳಿತು. ಅದಕ್ಕೆ ಆನೆ 'ನೀನೇನು ಚಿಂತಿಸಬೇಡ ಮಂಗಣ್ಣ, ನೀನು ನನ್ನ ಬೆನ್ನ ಮೇಲೆ ಕುಳಿತುಕೊ ನಾನು ನಿನಗೆ ದಾಟಿಸುತ್ತೇನೆ ಇಬ್ಬರು ಕೂಡಿ ಸ್ವರ್ಣಫಲವನ್ನು ತರೋಣ' ಎಂದು ಹೇಳಿತು.

ಮಂಗ ಆನೆಯ ಬೆನ್ನ ಮೇಲೆ ಕುಳಿತುಕೊಂಡಿತು. ಆನೆ ನದಿಯನ್ನು ದಾಟತೊಡಗಿತು. ಆನೆ ತುಂಬಾ ಬಲಶಾಲಿಯಾಗಿದ್ದುದ್ದರಿಂದ ನದಿಯ ಸೆಳವು ಅದಕ್ಕೆ ನದಿಯನ್ನು ದಾಟಲು ಅಡ್ಡಿ ಆಗಲಿಲ್ಲ. ಆನೆ ಮತ್ತು ಮಂಗ ಸುಲಭವಾಗಿ ನದಿಯನ್ನು ದಾಟಿದವು. ಎರಡು ಸ್ವರ್ಣಫಲದ ಮರದ ಬಳಿಗೆ ಹೋದವು. ಆದರೆ ಆ ಮರ ತುಂಬಾ ಎತ್ತರವಾಗಿತು. ಸ್ವರ್ಣಫಲ ಕೂಡ ತುಂಬಾ ಎತ್ತರದಲ್ಲಿತ್ತು. ಆನೆ ತನ್ನ ಸೊಂಡಿಲಿನಿಂದ ಆ ಮರದ ಕೊಂಬೆಗಳನ್ನು ಅಲ್ಲಾಡಿಸಿ ಸ್ವರ್ಣಫಲವನ್ನು ಕೆಳಗೆ ಕೆಡವಲು ಪ್ರಯತ್ನಿಸಿತು. ಆದರೆ ಮರದ ಕೊಂಬೆಗಳು ತುಂಬಾ ಗಟ್ಟಿಯಾಗಿದ್ದುದರಿಂದ ಫಲವನ್ನು ಕೆಳಗೆ ಬೀಳಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಆಗ ಆನೆ 'ಮರದ ಕೊಂಬೆಗಳನ್ನು ಅಲ್ಲಾಡಿಸಿ ಸ್ವರ್ಣಫಲವನ್ನು ನೆಲಕ್ಕೆ ಕೆಡವುವುದು ನನ್ನಿಂದ ಸಾಧ್ಯವಾಗುತ್ತಿಲ್ಲ. ಈ ಸ್ವರ್ಣಫಲ ನಮ್ಮ ಕೈಗೆ ಎಟಕುವುದಿಲ್ಲ ಎನಿಸತೊಡಗಿದೆ' ಎಂದು ಮಂಗನಿಗೆ ಹೇಳಿತು.

ಆಗ ಮಂಗ 'ಸಹೋದರ ಏಕೆ ಚಿಂತಿಸುವೆ ನಿನ್ನ ಈ ಮಿತ್ರನಿರುವುದು ನಿನ್ನ ಸಹಾಯಕ್ಕೆ ಅಲ್ಲವೇ? ನಾನು ಆ ಸ್ವರ್ಣಫಲವನ್ನು ಕಿತ್ತು ತರುತ್ತೇನೆ ಎಂದು ಹೇಳಿ ಮರವನ್ನೇರಿ ಕೊಂಬೆಯಿಂದ ಕೊಂಬೆಗೆ ಜಿಗಿಯುತ್ತ ಮರದ ತುದಿಯನ್ನು ತಲುಪಿ, ಸ್ವರ್ಣಫಲವನ್ನು ಕಿತ್ತು ತಂದಿತು. ಎರಡೂ ಸ್ವರ್ಣಫಲವನ್ನು ತೆಗೆದುಕೊಂಡು ಬಂದು ಅದನ್ನು ಗೂಬೆಗೆ ನೀಡಿದವು. ಆಗ ಗೂಬೆ 'ಈಗ ನಾನು ನಿಮ್ಮಿಬ್ಬರಲ್ಲಿ ಯಾರು ಶ್ರೇಷ್ಠರು ಎಂಬುದನ್ನು ಘೋಷಿಸುತ್ತೇನೆ' ಎಂದು ಹೇಳಿತು.

ಆ ಮಾತನ್ನು ಕೇಳಿ ಆನೆ 'ಈಗ ಅದರ ಅವಶ್ಯಕತೆ ಇಲ್ಲ ನಮ್ಮಿಬ್ಬರಿಗೂ ನಮ್ಮ ನಮ್ಮ ಶಕ್ತಿಯ ಅರಿವಾಗಿದೆ. ಇಬ್ಬರ ಶಕ್ತಿಯೂ ಮಹತ್ವಪೂರ್ಣ. ನಮ್ಮಿಬ್ಬರ ಪ್ರಯತ್ನದಿಂದಲೇ ಸ್ವರ್ಣಫಲ ತರಲು ಸಾಧ್ಯವಾಯಿತು. ಆದ್ದರಿಂದ ಈ ಸ್ಪರ್ಧೆಯಲ್ಲಿ ನಾವಿಬ್ಬರು ವಿಜೇತರೇ' ಎಂದು ಹೇಳಿತು.

ಆನೆಯ ಮಾತನ್ನು ಕೇಳಿದ ಗೂಬೆ 'ಈ ಅರಿವನ್ನು ನಿಮ್ಮಲ್ಲಿ ಮೂಡಿಸುವುದಕ್ಕಾಗಿಯೇ ನಾನು ನಿಮಗೆ ಈ ಸ್ಪರ್ಧೆಯನ್ನು ಏರ್ಪಡಿಸಿದ್ದೆ. ಸ್ನೇಹಿತರೆ, ದೇವರು ಪ್ರತಿ ಪ್ರಾಣಿಗೂ ಒಂದು ವಿಶಿಷ್ಟ ಶಕ್ತಿ ನೀಡಿದ್ದಾನೆ. ಆದ್ದರಿಂದ ನಮ್ಮ ಶಕ್ತಿಯ ಬಗ್ಗೆ ಗರ್ವ ಪಡುವುದು ಒಳ್ಳೆಯದಲ್ಲ. ನಾವು ನಮ್ಮ ಶಕ್ತಿಯ ಮಿತಿಯನ್ನು ಅರಿತು ನಡೆಯಬೇಕು' ಎಂದು ಹೇಳಿತು. ಅಂದಿನಿಂದ ಆನೆ ಮತ್ತು ಮಂಗ ಅನ್ಯೋನ್ಯವಾಗಿ ಜೀವಿಸತೊಡಗಿದವು.

